Environmental Social Justice & Governance Initiatives
*Organization in Special Consultative Status with the Economic and Social Council since 2011*

ESG Environment Support Group - Trust

1572, 36th Cross, 100 Feet Ring Road,
Banashankari II Stage,
Bangalore 560070. INDIA
Tel: 91-80-26713559-3561
Voice/Fax: 91-80-26713316
Email: esg@esgindia.org
Web: www.esgindia.org

ದಿನಾಂಕ: 27.03.2013

## ಪತ್ರಿಕಾ ಪ್ರಕಟಣೆ

# ಕರ್ನಾಟಕದ ಚಿತ್ರದುರ್ಗದಲ್ಲಿರುವ 'ಅಮೃತ ಮಹಲ್ ಕಾವಲ್' (ಅರಣ್ಯ) ಭೂಮಿಯನ್ನು ರಕ್ಷಣೆ, ಅಣು ಹಾಗೂ ಕೈಗಾರಿಕಾ ಯೋಜನೆಗಳಿಗಾಗಿ ಗುರುತಿಸಲಾಗಿದ್ದು, ಇದರಿಂದ ಪರಿಸರದ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ತಿಳಿಯಲು ನ್ಯಾಷನಲ್ ಗ್ರೀನ್ ಟ್ರಿಬ್ಯೂನಲ್ ವತಿಯಿಂದ ಸತ್ಯಶೋಧನೆ ಸಮಿತಿ ರಚನೆ

ಮಹತ್ವಪೂರ್ಣ ಹಾಗೂ ಅಭೂತಪೂರ್ವ ಬೆಳವಣಿಗೆಯೊಂದರಲ್ಲಿ, ಶ್ರೀ ಎಂ. ಚೊಕ್ಕಲಿಂಗಂ (ಜ್ಯೂಡಿಷಿಯಲ್ ಸದಸ್ಯರು) ಹಾಗೂ ಪ್ರೊ. ಡಾ. ಆರ್. ನಾಗೇಂದ್ರನ್ (ತಜ್ಞ ಸದಸ್ಯರು) ರವರನ್ನೊಳಗೊಂಡ ನ್ಯಾಷನಲ್ ಗ್ರೀನ್ ಟ್ರಿಬ್ಯೂನಲ್‌ನ ದಕ್ಷಿಣ ವಲಯ ಪೀಠವು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ 'ಅಮೃತ ಮಹಲ್ ಕಾವಲ್' (ಸಾಂಪ್ರದಾಯಿಕ ಹಸಿರುಭೂಮಿ ಹಾಗೂ ಜಿಲ್ಲಾ ಅರಣ್ಯಗಳು) ವ್ಯಾಪ್ತಿಯ 10,000 ಎಕರೆ ಭೂಮಿಯನ್ನು ವಿವಿಧ ರಕ್ಷಣೆ, ಅಣು, ಕೈಗಾರಿಕಾ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಬಳಸಿಕೊಳ್ಳಲು ಯೋಜಿಸಿದ್ದು, ಇದರಿಂದ ಪರಿಸರದ ಮೇಲೆ ಉಂಟಾಗಬಹುದಾಜ ಪರಿಣಾಮಗಳನ್ನು ಅಧ್ಯಯನ ಮಾಡುವ ಸಲುವಾಗಿ ದ್ವಿಸದಸ್ಯ ತಜ್ಞರ ಸಮಿತಿಯನ್ನು ರಚಿಸಿ ಸ್ಥಳಕ್ಕೆ ಅಧ್ಯಯನಕ್ಕಾಗಿ ಕಳುಹಿಸಲು ಸೂಚಿಸಿದೆ. ಈ ನ್ಯಾಯಪೀಠ ಆಯ್ಕೆ ಮಾಡಿರುವ ತಜ್ಞರ ಸಮಿತಿಯಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಎಕಾಲಜಿ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಸ್. ರವಿಚಂದ್ರ ರೆಡ್ಡಿ ಮತ್ತು ಸೆಂಟ್ರಲ್ ಸಿಲ್ಕ್ ಬೋರ್ಡ್, ಬೆಂಗಳೂರಿನ 'ಸಿ' ವಿಜ್ಞಾನಿ (ನಿವೃತ್ತ) ಉಪ ನಿರ್ದೇಶಕ ಡಾ. ಕೆ.ವಿ. ಅನಂತರಾಮನ್ ಅವರು ಇದ್ದಾರೆ.

2013ರ ಫೆಬ್ರವರಿ ತಿಂಗಳಿನಲ್ಲಿ ಪರಿಸರ ಬೆಂಬಲ ಗುಂಪಿನ (Environment Support Group) ಲಿಯೋ ಎಫ್. ಸಲಡಾನ್ಹಾ ಅವರು ನ್ಯಾಯಪೀಠದ ಮುಂದೆ ಸಲ್ಲಿಸಿದ ಅರ್ಜಿಯನ್ನು ಆಧರಿಸಿ ಈ ತಜ್ಞರ ಸಮಿತಿಯನ್ನು ರಚಿಸುವ ತೀರ್ಮಾನವನ್ನು ದಿನಾಂಕ ಮಾರ್ಚ್ 31, 2013ರಂದು ಮಾಡಲಾಯಿತು. 'ಅಮೃತ ಮಹಲ್ ಕಾವಲ್'ವ್ಯಾಪ್ತಿಗೆ ಸೇರಿದ 10,000 ಎಕರೆ ಭೂಪ್ರದೇಶವನ್ನು ಕೈಗಾರಿಕಾ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಗಳಿಗಾಗಿ ಬಳಸಿಕೊಳ್ಳಲು ನಿರ್ಧರಿಸಿರುವ ಕರ್ನಾಟಕ ಸರ್ಕಾರವು ಈ ನಿರ್ಧಾರ ತೆಗೆದುಕೊಳ್ಳುವ ಮೂಲಕ ವಿವಿಧ ಅರಣ್ಯ, ಜೀವವೈವಿಧ್ಯ ಹಾಗೂ ಪರಿಸರ ರಕ್ಷಣಾ ಕಾನೂನುಗಳನ್ನು ಉಲ್ಲಂಘಿಸಿದಂತಾಗಿದೆ ಎಂಬುದು ಅರ್ಜಿದಾರರ ವಾದ. ಈ ಅರ್ಜಿಯಲ್ಲಿರುವ ಸಂಪೂರ್ಣ ವಸ್ತುವಿಷಯವನ್ನು ಸರ್ಕಾರವು ಯಾವುದೇ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿದೆ, ಸಂಪೂರ್ಣ ಗೌಪ್ಯವಾಗಿ ನಿರ್ಧರಿಸಿದೆ ಹಾಗೂ ಈ ರೀತಿ ಮಾಡುವ ಮೂಲಕ ಪರಿಸರ ಹಾಗೂ ಮಾನವ ಹಕ್ಕು ರಕ್ಷಣಾ ಕಾನೂನುಗಳ ಉಚಿತ, ಮುಂಚಿತ ಹಾಗೂ ಮಾಹಿತಿ ಒದಗಿಸುವ ತತ್ತ್ವಗಳನ್ನು ವಿಸ್ತಾರವಾಗಿ ಉಲ್ಲಂಘಿಸಿದೆ. ಈ ಮಾರ್ಗಪರಿವರ್ತನೆ, ಹುಲ್ಲುಗಾವಲು ಹಾಗೂ ಗ್ರಾಮಾಂತರ ಪ್ರದೇಶದ ಜನರ ಜೀವನೋಪಾಯವನ್ನು ರಕ್ಷಿಸಲು ಕೇಂದ್ರ ಸರ್ಕಾರದ ವಿವಿಧ ನಿಯಮಗಳಿಗೆ ತದ್ವಿರುದ್ಧವಾಗಿದೆ ಎಂದು ಅರ್ಜಿದಾರರು ವಾದಿಸಿದ್ದಾರೆ.

ಈ ಬೃಹತ್ ಪ್ರದೇಶ ಅತೀಸೂಕ್ಷ್ಮ ಹುಲ್ಲುಗಾವಲು ಪ್ರದೇಶವಾಗಿದ್ದು, ಅತೀ ವಿರಳ ಗಿಡ ಮರಗಳು, ಪಕ್ಷಿ ಮೃಗಳಿರುವ ವೈವಿಧ್ಯಮಯ ಜೀವವೈಧ್ಯಗಳಿರುವ ಸ್ಥಳವಾಗಿದ್ದು, ಅತೀ ವಿರಳವಾದ ಬ್ಲಾಕ್ ಬಕ್ (ಆಂಟಿಲೋಪ್ ಸೆರವಿಕಪ್ರ), ಬಸ್ಟರ್ಡ್ (ಅರ್ಡಿಯೋಟಿಸ್ ನಿಗ್ರಿಸೆಪ್ಸ್, ಪ್ರಸ್ತುತ ಇಡೀ ದಕ್ಷಿಣ ಏಷ್ಯಾದಲ್ಲಿ ಕೇವಲ 250 ಇದೆ) ಹಾಗೂ ಬಹಳ ಕಡಿಮೆ ಸಂಖ್ಯೆಯಲ್ಲಿರುವ ಫ್ಲೋರಿಕನ್ (ಸೈಫೆಯೋಟೈಡ್ಸ್ ಇಂಡಿಕಸ್) ಜೀವಿಗಳಿರುವ ಪ್ರದೇಶವಾಗಿದೆ ಎಂಬುದು ಗೊತ್ತಿದ್ದೂ, ಈ ಉಲ್ಲಂಘನೆಗಳನ್ನು ಮಾಡಲಾಗುತ್ತಿದೆ ಎಂದು ಅರ್ಜಿಯಲ್ಲಿ ವಾದಿಸಿದೆ. ಈ ಹುಲ್ಲುಗಾವಲು ಪರಿಸರ ಪ್ರದೇಶ ಶತಮಾನಗಳಿಂದ ಅತೀ ವಿರಳವಾದ ಅಮೃತ ಮಹಲ್ ಜಾನುವಾರುಗಳಿರುವ ಸ್ಥಾನವಾಗಿದೆ, ಜೊತೆಗೆ ಖವಲ್‌ನ ಸುತ್ತಮುತ್ತಲಿನ ಸಮುದಾಯದ ಜನರಿಗೆ ಜೀವನೋಪಾಯದ ಅವಕಾಶಗಳನ್ನು ಒದಗಿಸುತ್ತಿದೆ. ಈ ಎಲ್ಲಾ ಮೌಲ್ಯಗಳನ್ನು ಗಮನಿಸಿದ ಕರ್ನಾಟಕ ಸರ್ಕಾರ ಕಾವಲ್ ಭೂಮಿಯನ್ನು ಕರ್ನಾಟಕ ಅರಣ್ಯ ನಿಯಮಗಳು, 1969ರಡಿ ಜಿಲ್ಲಾ ಅರಣ್ಯಗಳೆಂದು ಗುರುತಿಸಿತು ಹಾಗೂ 2002ರಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯದ ನಿರ್ದೇಶನಗಳು ಮತ್ತು ರಾಜ್ಯದ ಇತರ ಆದೇಶಗಳ ಮೂಲಕ ಇದನ್ನು ಸಂರಕ್ಷಿಸಲು ನಿರ್ದೇಶಿಸಿತು.

ಚಳ್ಳಕೆರೆಯ ಈ ಕಾವಲ್ ಭೂಪ್ರದೇಶ ಅಂದಾಜು 12,000 ಎಕರೆ ವ್ಯಾಪ್ತಿ ಹೊಂದಿದ್ದು, ಪ್ರಸ್ತುತ ಕರ್ನಾಟಕ ರಾಜ್ಯದ ಏಕೈಕ ಭಾಗಶಃ ಒಣ ಹುಲ್ಲುಗಾವಲು ಪ್ರದೇಶ ಎಂದು ಗುರುತಿಸಿಕೊಂಡಿದೆ. ಸ್ವತಂತ್ರ ಕಾಲದಲ್ಲಿ 4,00,000 ಎಕರೆಗಳಷ್ಟು 'ಕಾವಲ್' ಹುಲ್ಲುಗಾವಲು


ESG is a Public Charitable Trust with clearance per Foreign Contribution Regulation Act and eligible for tax exemptions per Sec. 80G and 12A of the Indian Income Tax Act.

ಪ್ರದೇಶ ಹೊಂದಿರುವ ಖ್ಯಾತಿಯನ್ನು ಪಡೆದಿದ್ದ ನಮ್ಮ ರಾಜ್ಯ, ಪ್ರಸ್ತುತ ಸರ್ವೋಚ್ಚ ನ್ಯಾಯಾಲಯಕ್ಕೆ ಅರಣ್ಯ ಇಲಾಖೆ ಸಲ್ಲಿಸಿರುವ ದಾಖಲೆಗಳ ಪ್ರಕಾರ ಕೇವಲ 45,000 ಎಕರೆಗಳಷ್ಟನ್ನು ಮಾತ್ರ ಉಳಿಸಿಕೊಂಡಿದೆ. ಈ ರೀತಿ ಕಾನೂನು ಬಾಹಿರವಾಗಿ ಸಂರಕ್ಷಿತ ಹುಲ್ಲುಗಾವಲು/ಅರಣ್ಯ ಭೂಪ್ರದೇಶವನ್ನು ಕಬಳಿಸಿರುವವರ ಪೈಕಿ ರಕ್ಷಣಾ ಅಧ್ಯಯನ ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), ಬಾಬಾ ಆಟೋಮಿಕ್ ರೀಸರ್ಚ್ ಸೆಂಟರ್ (ಯುರೇನಿಯಂ ಎನರಿಚ್‌ಮೆಂಟ್ ಸೌಲಭ್ಯ), ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ (ಸಿಸ್ಕ್ರೋಟನ್), ಇಂಡಿಯನ್ ಸ್ಪೇಸ್ ರೀಸರ್ಚ್ ಆರ್ಗನೈಸೇಷನ್ (ಸ್ಯಾಟಲೈಟ್ ಸೆಂಟರ್), ಸಗಿಟೌರ್ ಪ್ರೈ.ಲಿ. (ಸೋಲಾರ್ ಫಾರಂ), ಕರ್ನಾಟಕ ಗೃಹ ಮಂಡಳಿ (ಟೌನ್‌ಷಿಪ್) ಹಾಗೂ ಕರ್ನಾಟಕ ಸಣ್ಣ ಕೈಗಾರಿಕಾ ಸಂಘ ಹಾಗೂ ಕರ್ನಾಟಕ ಉದ್ಯೋಗ್ ಮಿತ್ರ (ರಕ್ಷಣಾ ಕ್ಷೇತ್ರಕ್ಕಾಗಿ ವಿವಿಧ ಕೈಗಾರಿಕಾ ಹಾಗೂ ಇತರ ಘಟಕಗಳ) ಸೇರಿವೆ ಎಂದು ಸಾಕ್ಷಿ ಸಮೇತ ಅರ್ಜಿದಾರರು ವಾದಿಸಿರುತ್ತಾರೆ. ಈ ಅತ್ಯಂತ ಸಂರಕ್ಷಿತ ಭೂಪ್ರದೇಶವನ್ನು ಕೇವಲ ಎಕರೆಗೆ ರೂ.30–35,000/–ರಷ್ಟು ದರದಲ್ಲಿ ಒದಗಿಸಲಾಗಿದೆ ಎಂಬುದು ವಿಪರ್ಯಾಸ.

ಕನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಎರಡು ವರ್ಷಗಳ ಹಿಂದೆ ಪರಿಸರ ಉಲ್ಲಂಘನೆ ಸೂಚನೆಗಳನ್ನು ನೀಡಿರುವ ಸಂಗತಿಯನ್ನು ಸಾಕ್ಷಿ ಸಮೇತ ಅರ್ಜಿದಾರರು ಒದಗಿಸಿರುತ್ತಾರೆ. ಈ ಪ್ರಕಾರ ಪರಿಸರ ಹಾಗೂ ಅರಣ್ಯಗಳ ಯಾವುದೇ ಕಾಯ್ದೆ ಕಾನೂನುಗಳನ್ನು ಪಾಲಿಸಲಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಬದಲಾಗಿ ಡಿಆರ್‌ಡಿಒ ವತಿಯಿಂದ 30ಕಿಮೀ ಉದ್ದದ ಗೋಡೆಯ ನಿರ್ಮಾಣ ಸೇರದಿಂತೆ ಹಲವು ಚಟುವಟಿಕೆಗಳನ್ನು ಈಗಾಗಲೇ ಆರಂಭಿಸಲಾಗಿದೆ. ಇದು ಪರಿಸರ ಪರಿಣಾಮ ಮೌಲ್ಯಮಾಪನ ಅ ಧಿಸೂಚನೆ 2006ರ ಉಲ್ಲಂಘನೆಯಾಗಿದ್ದು, ಪರಿಸರ ಹಾಗೂ ಅರಣ್ಯ ಇಲಾಖೆಗಳಿಂದ ಕ್ಲಿಯರೆನ್ಸ್ ಪಡೆಯುವ ಮುನ್ನ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳುವಂತಿಲ್ಲ ಎಂಬ ನಿಯಮಕ್ಕೆ ವಿರುದ್ಧವಾಗಿದೆ. ಈ ಚಟುವಟಿಕೆಗಳಿಂದಾಗಿ ಸ್ಥಳೀಯ ಸಮುದಾಯದ ಜನರು ತಮ್ಮ ಹಕ್ಕಿನ ಭೂಪ್ರದೇಶ, ಕೊಳಗಳು ಹಾಗೂ ತೊರೆಗಳಿಗೆ ಭೇಟಿ ಮಾಡುವುದರಿಂದ ವಂಚಿತರಾಗಿದ್ದಾರೆ. ಇವು ಈ ಭಾಗದ ಜನರ ಹಾಗೂ ಜಾನುವಾರುಗಳ ಏಕೈಕ ಕುಡಿಯುವ ನೀರಿನ ಸಂಪನ್ಮೂಲಗಳಾಗಿವೆ. ಈ ಗೋಡೆ ನಿರ್ಮಾಣದಿಂದ ಬ್ಲಾಕ್ ಬಕ್ ಹಾಗೂ ಇತರ ವನ್ಯಮೃಗಗಳ ಓಡಾಟಕ್ಕೆ ಕಷ್ಟವಾಗಿದೆ. ಜೊತೆಗೆ, ಡಿಆರ್‌ಡಿಒ ನಾಗರೀಕ ಹಾಗೂ ಮಿಲಿಟರಿ ಪ್ರಾಧಿಕಾರದ ಯಾವುದೇ ಅನುಮತಿಯಿಲ್ಲದೆ ಹಲವು ಬಾರಿ ಬಾಂಬ್‌ಗಳನ್ನು ಸಿಡಿಸಿರುವ ಸಂಗತಿಗಳು ನಡೆದಿವೆ.

2013ರ ಫೆಬ್ರವರಿ ತಿಂಗಳಿನಲ್ಲಿ ಸಲ್ಲಿಸಿರುವ ಅರ್ಜಿಗಳು ಈ ಎಲ್ಲಾ ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯಲು ಮಧ್ಯಂತರ ನಿಲುಗಡೆ ಆದೇಶವನ್ನು ನೀಡುವುದರ ಮೂಲಕ ಈ ಭಾಗದ ಸಮುದಾಯ ಜನರಿಗೆ ಮೇವು ಪ್ರದೇಶಗಳನ್ನು ಉಪಯೋಗಿಸಲು ಅನುವು ಮಾಡಿಕೊಡಬೇಕೆಂದು ಕೋರಲಾಗಿದೆ. ಈ ಹಿನ್ನೆಲೆಯಲ್ಲಿ ನ್ಯಾಯಪೀಠವು ಹಲವು ಬಾರಿ ಕರ್ನಾಟಕ ಸರ್ಕಾರ ಹಾಗೂ ಕೇಂದ್ರದ ಪರಿಸರ ಹಾಗೂ ಅರಣ್ಯ ಮಂತ್ರಾಲಯ ಸೇರಿದಂತೆ ಕರ್ನಾಟಕದ ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳನ್ನು ಸ್ವಯಂ ನ್ಯಾಯಪೀಠದ ಮುಂದೆ ಹಾಜರಾಗುವಂತೆ ಕೋರಿತ್ತು. ಆದರೆ ಈವರೆಗೂ ಯಾವುದೇ ಪ್ರತಿಕ್ರಿಯೆ ದೊರೆತಿಲ್ಲ. ಈ ಪರಿಸ್ಥಿತಿಯನ್ನು ಪರಿಗಣಿಸುತ್ತಾ, ಮಾರ್ಚ್ 21ರ ಆದೇಶದಲ್ಲಿ ಈ ರೀತಿ ನಮೂದಿಸಲಾಗಿದೆ "(1) ನ್ಯಾಯಪೀಠದ ಸಲಹೆಯಂತೆ ಮಧ್ಯಂತರ ಪರಿಹಾರ ಮಂಜೂರು ಮಾಡುವ ಮುನ್ನ ಪ್ರತಿಕ್ರಿಯೆ ನೀಡುವವರ ಅಭಿಪ್ರಾಯ, ದೃಷ್ಟಿಕೋನಗಳನ್ನೂ ಪರಿಗಣಿಸುವುದು ಅಗತ್ಯ ಎಂದು ತಿಳಿಸಲಾಗಿ, ಈ ವ್ಯಾಜ್ಯದ ಹಿಯರಿಂಗ್ ಅನ್ನು ದಿನಾಂಕ 15.04.2013ರವರೆಗೆ ಮುಂದೂಡಲಾಗಿದೆ. ಈ ಅವ ಧಿಯೊಳಗೆ ಪ್ರತಿಕ್ರಿಯೆ ನೀಡುವವರು ತಮ್ಮ ನಿಲುವನ್ನು ತಿಳಿಯಪಡಿಸದಿದ್ದಲ್ಲಿ, ಈ ಅರ್ಜಿಗೆ ಅವರ ಯಾವುದೇ ಆಕ್ಷೇಪಣೆಯಿಲ್ಲ ಎಂದು ತಿಳಿಯಲಾಗುತ್ತದೆ,"

ಅರ್ಜಿಗಳು ಹಾಗೂ ಸಂಬಂಧಪಟ್ಟ ದಾಖಲೆಗಳು ಇಎಸ್‌ಜಿ ಅಂತರ್ಜಾಲತಾಣ: www.esgindia.org ದಲ್ಲಿ ಲಭ್ಯವಿದೆ. ಜೊತೆಗೆ ಟ್ರಿಬ್ಯೂನಲ್‌ನ ದಿನಾಂಕ ಮಾರ್ಚ್ 21, 2013ರ ಪ್ರತಿಯನ್ನೂ ಲಗತ್ತಿಸಿದೆ.


ಲಿಯೋ ಎಫ್ ಸಲ್ಡಾನ್ಹಾ
Applicant in 6/2013 as Party in Person
leo@esgindia.org

ಭಾರ್ಗವಿ ಎಸ್. ರಾವ್
Coordinator (Education)
bhargavi@esgindia.org

ಆರ್ಥರ್ ಪೆರಿಯೆರಾ
Trustee representing ESG in Application 12/2013
arthurjpereira@gmail.com

Environment Support Group



ESG is a Public Charitable Trust with clearance per Foreign Contribution Regulation Act and eligible for tax exemptions per Sec. 80G and 12A of the Indian Income Tax Act.

## An overview of the allocation of lands and the purpose for which Challakere's 'Amrit Mahal Kaval' lands are diverted

| Sl. No. | Organisation | Village Name | Sy. No. | Extent of land in acres | Purpose |
|---|---|---|---|---|---|
| A | B | C | D | E | F |
| 1 | Defence Research Development Organisation | Varavu Kaval and Khudapura | 343, 47 | 4000 and 290 respectively (total 4290) | Advanced R&D complex, a 3.5 km runway and test centre for long-endurance ( 48-72 hours) UAVs and UCAVs |
| 2 | Indian Institute of Science | Khudapura | 47 | 1500 | Synchrotron, Energy Research Centre and Advanced Aerospace Research Centre |
| 3 | Bhabha Atomic Research Centre | Ullarti Kaval and Khudapura | 1, 47 | 1410 and 400 respectively (toatel 1810) | Special Material Enrichment Facility (Uranium) |
| 4 | Indian Space Research Organisation | Ullarti Kaval and Khudapura | 1, 47 | 473 and 100 respectively (total 573) | Spacecraft Technologies |
| 5 | Karnataka Small Scale Industries Development Corporation | Ullarti Kaval and Khudapura | 1, 47 | 250 and 50 respectively (total 300) | Various industrial ancillary units |
| 6 | Sagitaur Ventures India Pvt. Ltd. | Khudapura | N.A. | 1250 | Integrated Solar Park Development along with Grid Connected 25 MW Solar PV Power Project |
| 7 | Karnataka Housing Board | Khudapura | 47 | 50 | Developing Housing Layout and sale of constructed villas |
| | **Total** | | | **9323 confirmed** | |


ESG is a Public Charitable Trust with clearance per Foreign Contribution Regulation Act and eligible for tax exemptions per Sec. 80G and 12A of the Indian Income Tax Act.